Series ψYZXW

Set-4

Q.P. Code **13**

Roll No. ☐☐☐☐☐☐☐☐

Candidates must write the Q.P. Code on the title page of the answer-book.

# ಕನ್ನಡ

# KANNADA

*ಅನುಮತಿಸಲಾದ ಸಮಯ : 3 ಗಂಟೆ* *ಗರಿಷ್ಠ ಅಂಕಗಳು : 80*

*Time allowed : 3 hours* *Maximum Marks : 80*

- ಈ ಪ್ರಶ್ನೆ ಪತ್ರಿಕೆಯಲ್ಲಿ **15** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.
- ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.
- ಈ ಪ್ರಶ್ನೆ ಪತ್ರಿಕೆಯಲ್ಲಿ **17** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.
- **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ಬರೆಯಿರಿ.**
- ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯಬಾರದು.

- Please check that this question paper contains **15** printed pages.
- Code number given on the right hand side of the question paper should be written on the title page of the answer-book by the candidate.
- Please check that this question paper contains **17** questions.
- **Please write down the Serial Number of the question in the answer-book before attempting it.**
- 15 minutes time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period.

**General Instructions :**

Read the following instructions carefully and follow :

1. This question paper contains **A, B, C & D four (4)** Sections & It has total **17** questions.
2. **Section A** : (Unseen Comprehension (Passage) Question No. **1** and **2**.
3. **Section B** : MCQs (Grammar) Question No. **3** to **6**.
4. **Section C** : Seen Comprehension (Prose, Poem & Non-detailed portion) Question No. **7** to **9**.
5. **Section D** : Descriptive type. Question No. **10** to **17**.

   Attempt questions as per specific instructions.

   Write Question No. in answer book before attempting it.

**ಸೂಚನೆಗಳು :**

**ಕೆಳಗೆ ನೀಡಲಾದ ಸೂಚನೆಗಳನ್ನು ಗಮನವಿಟ್ಟು ಓದಿ :**

1. ಈ ಪ್ರಶ್ನೆ ಪತ್ರಿಕೆಯು **A, B, C** ಮತ್ತು **D** ಎಂಬ **ನಾಲ್ಕು (4)** ಭಾಗಗಳನ್ನು ಮತ್ತು ಒಟ್ಟು **17** ಪ್ರಶ್ನೆಗಳನ್ನು ಒಳಗೊಂಡಿದೆ.
2. **ವಿಭಾಗ A,** ವಾಚನ ಮತ್ತು ಗ್ರಹಿಕಾ ಕೌಶಲ. ಪ್ರಶ್ನೆ ಸಂಖ್ಯೆ **1** ಮತ್ತು **2**.
3. **ವಿಭಾಗ B,** ಬಹು ಆಯ್ಕೆ ಪ್ರಶ್ನೆಗಳು (ಅನ್ವಯಿಕ ವ್ಯಾಕರಣ) ಪ್ರಶ್ನೆ ಸಂಖ್ಯೆ **3** ರಿಂದ **6**.
4. **ವಿಭಾಗ C,** ಬಹು ಆಯ್ಕೆ ಪ್ರಶ್ನೆಗಳು (ಪಠ್ಯಗಳ ಅಧ್ಯಯನ) ಪ್ರಶ್ನೆ ಸಂಖ್ಯೆ **7** ರಿಂದ **9**.
5. **ವಿಭಾಗ D,** ಬರವಣಿಗೆ ಕೌಶಲ್ಯ, ಪ್ರಶ್ನೆ ಸಂಖ್ಯೆ **10** ರಿಂದ **17**.

   ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ನೀಡಿರುವ ಸೂಚನೆಗಳನ್ನು ಗಮನಿಸಿ.

   ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಉತ್ತರ ಹಾಳೆಯಲ್ಲಿ ಪ್ರಶ್ನೆ ಸಂಖ್ಯೆಯನ್ನು ಬರೆಯಿರಿ.

## SECTION – A

### ವಾಚನ ಮತ್ತು ಗ್ರಹಿಕಾ ಕೌಶಲ

1. (A) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5 × 1 = 5**

ನೀರು ಭೂಮಿಯ ಮತ್ತು ಮಾನವ ದೇಹದ ಶೇಕಡ ಎಪ್ಪತ್ತರಷ್ಟಿದೆ. ಇಂದಿನ ಜಗತ್ತಿನಲ್ಲಿ ಲಕ್ಷಾಂತರ ಜಲಚರಗಳು, ಮನುಕುಲವೂ ನೀರಿನ ಮೇಲೆ ಅವಲಂಬಿತವಾಗಿದೆ. ಎಲ್ಲ ಪ್ರಮುಖ ಕೈಗಾರಿಕೆಗಳಿಗೂ ಒಂದಲ್ಲ ಒಂದು ರೂಪದಲ್ಲಿ ನೀರು ಬೇಕಾಗುತ್ತದೆ. ಆದರೆ, ಈ ಅಮೂಲ್ಯ ಸಂಪನ್ಮೂಲ ದಿನದಿಂದ ದಿನಕ್ಕೆ ಬರಿದಾಗುತ್ತಿದೆ. ಅದರ ಹಿಂದಿನ ಬಹುತೇಕ ಕಾರಣಗಳು ಕೇವಲ ಮಾನವ ನಿರ್ಮಿತ. ಹೀಗಾಗಿ ಜಲ ಸಂರಕ್ಷಣೆಯ ಅಗತ್ಯ ಈಗ ಹಿಂದೆಂದಿಗಿಂತಲೂ ಹೆಚ್ಚಿದೆ. ಲಭ್ಯವಿರುವ ಎಲ್ಲಾ ನೀರಿನಲ್ಲಿ, ಕೇವಲ ಮೂರು ಪ್ರತಿಶತದಷ್ಟು ಸಿಹಿನೀರು, ಆದ್ದರಿಂದ, ಈ ನೀರನ್ನು ಬುದ್ಧಿವಂತಿಕೆಯಿಂದ ಮತ್ತು ಎಚ್ಚರಿಕೆಯಿಂದ ಬಳಸುವುದು ಅತ್ಯಗತ್ಯ. ಆದರೆ, ನಾವು ಇಲ್ಲಿಯವರೆಗೆ ಇದಕ್ಕೆ ವಿರುದ್ಧವಾಗಿ ಮಾಡುತ್ತಿದ್ದೇವೆ.

ಪ್ರತಿದಿನ, ನಾವು ವಿವಿಧ ಉದ್ದೇಶಗಳಿಗಾಗಿ ನೀರನ್ನು ಬಳಸಿಕೊಳ್ಳುತ್ತೇವೆ. ಅದಕ್ಕೆ ಪೂರಕವಾಗಿ ಅದನ್ನು ದಿನವೂ ಮಲೀನಗೊಳಿಸುತ್ತಲೇ ಇರುತ್ತೇವೆ. ಕೈಗಾರಿಕೆಗಳು ಮತ್ತು ಕೊಳಚೆ ನೀರಿನ ಹೊರಸೂಸುವಿಕೆಯಿಂದ ಹೊರಸೂಸುವ ತ್ಯಾಜ್ಯಗಳು ನಮ್ಮ ಜಲಮೂಲಗಳಿಗೆ ನೇರವಾಗಿ ಸೇರುತ್ತದೆ. ಅದೇ ರೀತಿ ನದಿಪಾತ್ರಗಳ ಫಲವತ್ತಾದ ಮಣ್ಣನ್ನು ಅಜಾಗರೂಕತೆಯಿಂದ ಬಳಸಲಾಗುತ್ತಿದೆ. ಇದು ಪ್ರವಾಹಕ್ಕೂ ಕಾರಣವಾಗುತ್ತಿದೆ.

ರಾಷ್ಟ್ರೀಯ ಮಟ್ಟದಲ್ಲಿ ಮತ್ತೆ ವೈಯಕ್ತಿಕ ಮಟ್ಟದಲ್ಲಿ ನೀರನ್ನು ಸಂರಕ್ಷಿಸಲು ಅನೇಕ ಕ್ರಮಗಳನ್ನು ತೆಗೆದುಕೊಳ್ಳಬಹುದು. ಮೊದಲನೆಯದಾಗಿ ನಮ್ಮ ಸರ್ಕಾರಗಳು ನೀರನ್ನು ಸಂರಕ್ಷಿಸಲು ಸಮರ್ಥ ಕಾರ್ಯತಂತ್ರಗಳನ್ನು ಜಾರಿಗೆ ತರಬೇಕು. ವೈಜ್ಞಾನಿಕ ಸಮುದಾಯವು ನೀರನ್ನು ಉಳಿಸಲು ಸುಧಾರಿತ ಕೃಷಿ ಸುಧಾರಣೆಗಳ ಮೇಲೆ ಕೆಲಸ ಮಾಡಬೇಕು. ಅದೇ ರೀತಿ ನಗರಗಳ ಸರಿಯಾದ ಯೋಜನೆ ಮತ್ತು ಜಾಹೀರಾತುಗಳ ಮೂಲಕ ಜಲ ಸಂರಕ್ಷಣೆಗೆ ಉತ್ತೇಜನ ನೀಡಬೇಕು. ವೈಯಕ್ತಿಕ ಮಟ್ಟದಲ್ಲಿ ಶವರ್ ಅಥವಾ ಟಬ್‌ಗಳ ಬದಲಿಗೆ ಬಕೆಟ್‌ಗಳನ್ನು ಆಯ್ಕೆ ಮಾಡುವ ಮೂಲಕ ನಾವು ಪ್ರಾರಂಭಿಸಬಹುದು. ಇದಲ್ಲದೆ, ಹಲ್ಲುಜ್ಜುವಾಗ ಅಥವಾ ಪಾತ್ರೆಗಳನ್ನು ತೊಳೆಯುವಾಗ ನಲ್ಲಿಯನ್ನು 'ಬಂದ್' ಮಾಡುವ ಮೂಲಕ ನೀರನ್ನು ಉಳಿಸಬಹುದು. ತರಕಾರಿ/ಹಣ್ಣುಗಳನ್ನು ತೊಳೆದಾದ ಮೇಲೆ ನೀರನ್ನು ವ್ಯರ್ಥ ಮಾಡದೆ, ಸಸ್ಯಗಳಿಗೆ ನೀರುಣಿಸಲು ಬಳಸಬೇಕು. ಹೆಚ್ಚು ಹೆಚ್ಚು ಗಿಡಗಳನ್ನು ನೆಡಲು ಪ್ರಾರಂಭಿಸಬೇಕು. ಮಳೆನೀರು ಕೊಯ್ಲು ಕಡ್ಡಾಯಗೊಳಿಸಬೇಕು. ಇದರಿಂದ ಮಳೆಯ ಲಾಭ ಸಿಗುತ್ತದೆ.

**ಪ್ರಶ್ನೆಗಳು.**

I. ಅಮೂಲ್ಯ ಸಂಪತ್ತು ನೀರು ದಿನದಿಂದ ದಿನಕ್ಕೆ ಬರಿದಾಗುತ್ತಿರಲು ಕಾರಣಗಳು

(a) ದಾನವ ನಿರ್ಮಿತ (b) ಪ್ರಕೃತಿ ನಿರ್ಮಿತ

(c) ಮಾನವ ನಿರ್ಮಿತ (d) ಯಂತ್ರ ನಿರ್ಮಿತ

II. ಸಿಹಿನೀರಿನ ಪ್ರಮಾಣ

(a) 30 ಪ್ರತಿ ಶತ (b) 3 ಪ್ರತಿ ಶತ (c) 2 ಪ್ರತಿ ಶತ (d) 5 ಪ್ರತಿ ಶತ

III. ನದಿ ಪಾತ್ರಗಳ ಫಲವತ್ತಾದ ಮಣ್ಣನ್ನು _____ ಯಿಂದ ಬಳಸಲಾಗುತ್ತಿದೆ.

(a) ಅಜಾಗರೂಕತೆ (b) ಎಚ್ಚರಿಕೆ

(c) ಜವಾಬ್ದಾರಿ (d) ಜಾಗರೂಕತೆ

IV. _____ ಗಳ ಮೂಲಕ ಜಲಸಂರಕ್ಷಣೆ ಉತ್ತೇಜನ ನೀಡಬೇಕು.

(a) ಕಿರುಚಿತ್ರಗಳ (b) ಜಾಹೀರಾತು (c) ಪ್ರದರ್ಶನ (d) ಚಿತ್ರಪ್ರದರ್ಶನ

V. ತರಕಾರಿ / ಹಣ್ಣುಗಳನ್ನು ತೊಳೆದಾದ ಮೇಲೆ ನೀರನ್ನು _____ ಬಳಸಬೇಕು.

(a) ಬೆಳೆಗಳಿಗೆ ನೀರುಣಿಸಲು (b) ಸಸ್ಯಗಳಿಗೆ ನೀರುಣಿಸಲು

(c) ಗಿಡಮರ ಬೆಳೆಸಲು (d) ವಾಹನ ತೊಳೆಯಲು

**ಅಥವಾ**

(B) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5 × 1 = 5**

ಹಾರಾಟ ಮಾಡುವ ಹಕ್ಕಿಗಳಿಗೆ ಹೆಚ್ಚಿನ ಶಕ್ತಿ ಬೇಕು. ಅವು ತಿಂದ ಆಹಾರ ಬಹುಬೇಗ ಕರಗಿ ಹೋಗಿಬಿಡುತ್ತದೆ. ಹಾಗಾಗಿ ಇಡೀ ರಾತ್ರಿಯ ಹಸಿವಿನ ನಂತರ ನಸುಕು ಬೆಳಕು ಮೂಡುತ್ತಿರುವಂತೇ ಎದ್ದು ಬಿಡುತ್ತವೆ ಮತ್ತು ಆಹಾರ ಶೋಧ ಕಾರ್ಯದಲ್ಲಿ ತೊಡಗುತ್ತವೆ. ಹೊಟ್ಟೆಯ ಪ್ರಶ್ನೆ ಒಮ್ಮೆ ಬಗೆಹರಿದರೆ, ಮತ್ತೊಮ್ಮೆ ಹಸಿವಾಗುವವರೆಗೆ ಸ್ವಲ್ಪ ವಿರಾಮ. ಆಗ ಅವು ಮೊದಲು ತಮ್ಮ ಶುಚಿತ್ವದ ಕಡೆಗೆ ಗಮನ ಕೊಡುತ್ತವೆ. ನಂತರ ಕುಪ್ಪಳಿಸುವುದು, ಕಾರಣವಿಲ್ಲದೆ ಹಾರಾಡುವುದು, ಪರಿಸರ ಶೋಧಕಾರ್ಯ ಇಂಥ ಚಟುವಟಿಕೆಗಳಲ್ಲಿ ತೊಡಗಿ ತಮ್ಮನ್ನು ತಾವು ಚೈತನ್ಯಪೂರ್ಣರಾಗಿಸಿಕೊಳ್ಳುತ್ತವೆ. ಆದರೆ ತಮ್ಮ ವಂಶಾಭಿವೃದ್ಧಿಯ ಕಾಲ ಬಂದಾಗ ಮಾತ್ರ ಗಂಡು ಹೆಣ್ಣುಗಳು ಪರಸ್ಪರ ಆಕರ್ಷಿಸಿಕೊಂಡು, ಅವುಗಳಿಗೆ ಹುಟ್ಟಿದ ಮರಿಗಳು ಬಲಿಷ್ಠವಾಗಿ ಹಾರಿಹೋಗುವ ತನಕ ಹಕ್ಕಿಗಳಿಗೆ ಬಿಡುವಿಲ್ಲದಷ್ಟು ಕೆಲಸ !

ಎಲ್ಲಿ ಪಕ್ಷಿ ಪ್ರಪಂಚ ಸುಸ್ಥಿತಿಯಲ್ಲಿದೆಯೋ, ಅಲ್ಲಿನ ಪರಿಸರ ಆರೋಗ್ಯವಾಗಿದೆ ಎಂದೇ ಅರ್ಥ. ಏಕೆಂದರೆ ಹಕ್ಕಿಗಳು ಶುದ್ಧ ಹಾಗೂ ಅಶುದ್ಧ ಪರಿಸರಗಳಿಗೆ ಕೈಗನ್ನಡಿಗಳು. ಮಾಲಿನ್ಯ ಹೆಚ್ಚಾದ ಕಡೆ ಪಕ್ಷಿಗಳು ಉಳಿಯಲಾರವು. ಹಕ್ಕಿಗಳು ನಿಸರ್ಗದ ನಿಷ್ಠಾವಂತ ಪ್ರಜೆಗಳು. ಅವು ಯಾವ ಕಾರಣಕ್ಕೂ ನಿಸರ್ಗವನ್ನು ಹಾಳುಗೆಡಹುವುದಿಲ್ಲ. ಮರಕುಟಿಕ ಹಕ್ಕಿ ಒಳ್ಳೆಯ ಆರೋಗ್ಯವಂತ ಮರವನ್ನು ಕುಟುಕಿ ನಾಶ ಮಾಡುವುದಿಲ್ಲ. ಕೀಟಗಳು ಹಿಡಿದಿರುವ ಮರವನ್ನು ಕುಟುಕಿ ಒಳಗೆ ಮರದ ನಾಶಕ್ಕೆ ಕಾರಣವಾಗುವ ಕೀಟಗಳನ್ನು ತೆಗೆದು ತಿಂದು, ಮರ ಉಳಿಯುವಂತೆ ಮಾಡುತ್ತದೆ. ಮರದ ಒಣಕಡ್ಡಿಗಳನ್ನು ತಮ್ಮ ಗೂಡುಗಳಿಗಾಗಿ ಮುರಿದು ಮರ ಚಿಗುರಲು ಸಹಾಯ ಮಾಡುತ್ತದೆ. ಹಣ್ಣುಗಳನ್ನು ತಿಂದು ಬೀಜಗಳನ್ನು ಉದುರಿಸಿ ಮರಗಳ ವಂಶಾಭಿವೃದ್ಧಿಗೆ ಕಾರಣವಾಗುತ್ತದೆ. ಬೆಳೆಗಳ ಕೀಟಗಳನ್ನು ತಿಂದು ರೈತನಿಗೆ ಸಹಾಯ ಮಾಡುತ್ತವೆ. ನಿಸರ್ಗದ ಸಮತೋಲನಕ್ಕೆ ಹಕ್ಕಿಗಳ ದೇಣಿಗೆ ಅಪಾರವಾಗಿದೆ.

ಹಕ್ಕಿಗಳನ್ನು ನೆಲ, ಜಲ ಮತ್ತು ಹಿಂಸ್ರಕಗಳೆಂದು ಮೂರು ವಿಭಾಗ ಮಾಡಬಹುದು. ಕೊಕ್ಕು – ರೆಕ್ಕೆ, ಆಹಾರ – ವಿಹಾರ, ನಿದ್ದೆ – ಗೂಡು ಎಲ್ಲದರಲ್ಲೂ ಈ ಮೂರು ವಿಭಾಗಗಳಲ್ಲಿ ವ್ಯತ್ಯಾಸವಿರುತ್ತದೆ. ನೀರಿನಲ್ಲಿ ತೇಲುವ, ಗಾಳಿಗೆ ಜೋಲಾಡುವ, ಎಲೆಗಳನ್ನು ಹೊಲೆದು ರಚಿಸುವ, ಮಣ್ಣಿನಲ್ಲೇ ಗೂಡುಕಟ್ಟುವ ಇವೇ ಮುಂತಾದ ಹತ್ತು ಬಗೆಯಲ್ಲಿ ಗೂಡು ಕಟ್ಟುತ್ತವೆ. ಇವುಗಳಲ್ಲಿ ಆಹಾರದ ಕ್ರಮದಲ್ಲೂ ತುಂಬಾ ವ್ಯತ್ಯಾಸಗಳಿವೆ. ಹಣ್ಣು, ಧಾನ್ಯ, ಕೀಟ, ಮಾಂಸ, ಮಕರಂದ ಮತ್ತು ಸರ್ವಭಕ್ಷಕಗಳೆಂದು ಗುಂಪು ಮಾಡಬಹುದು. ಪ್ರತಿ ಪ್ರಭೇದದ ಹಕ್ಕಿಗೂ ತನ್ನದೇ ಆದ ಆಹಾರ ಕ್ರಮವಿರುತ್ತದೆ. ನಾವು ಸಾಕಲು ತಂದು ಅದರ ಆಹಾರ ಕ್ರಮವನ್ನು ಅರಿಯದೇ ಅವು ತಿನ್ನಬಾರದ್ದು ಏನಾದರೂ ಕೊಟ್ಟರೆ ಅದನ್ನು ತಿಂದ ಹಕ್ಕಿ ಸತ್ತೇ ಹೋಗಬಹುದು. ಆಹಾರದ ವಿಚಾರದಲ್ಲಿ ಅವೆಷ್ಟು ಸೂಕ್ಷ್ಮವೆಂದರೆ ಸೂಜಿಮೊನೆಯಷ್ಟು ವ್ಯತ್ಯಾಸವನ್ನು ಅವು ಸಹಿಸಲಾರವು !

**ಪ್ರಶ್ನೆಗಳು .**

I. ಪಕ್ಷಿಗಳು ತಮ್ಮನ್ನು ಚೈತನ್ಯಪೂರ್ಣವಾಗಿರಿಸಿಕೊಳ್ಳಲು ಮಾಡುವುದು

(a) ಹಾರಾಡುವುದು, ಆಹಾರ ಹುಡುಕುವುದು, ಕುಪ್ಪಳಿಸುವುದು

(b) ಹಾರಾಡುವುದು, ಕುಪ್ಪಳಿಸುವುದು, ಕೂಗುವುದು

(c) ಪರಿಸರ ಶೋಧಕಾರ್ಯ, ಕುಪ್ಪಳಿಸುವುದು, ಹಾರಾಡುವುದು

(d) ಹಾರಾಡುವುದು, ಪರಿಸರ ಶೋಧಕಾರ್ಯ, ಹಾಡುವುದು

II. ಮರಕುಟಿಕ ಹಕ್ಕಿಯು ______ ಮರವನ್ನು ಕುಟುಕಿ ಕೀಟಗಳನ್ನು ತಿನ್ನುತ್ತದೆ.

(a) ಆರೋಗ್ಯವಂತ (b) ಕೀಟ ಹಿಡಿದಿರುವ

(c) ದಪ್ಪ ಬೊಡ್ಡೆಯ (d) ಮೃದುವಾದ

III. **ಹೇಳಿಕೆ-1.** ಮರದ ಒಣಕಡ್ಡಿಗಳನ್ನು ಗೂಡುಗಳಿಗಾಗಿ ಮುರಿದು ಮರ ಚಿಗುರಲು ಸಹಾಯ ಮಾಡುತ್ತದೆ.

**ಹೇಳಿಕೆ-2.** ಬೆಳೆದ ಕಾಳುಗಳನ್ನು ತಿಂದು ರೈತರಿಗೆ ತೊಂದರೆ ಕೊಡುತ್ತವೆ.

**ಹೇಳಿಕೆ-3.** ಹಣ್ಣುಗಳನ್ನು ತಿಂದು ಬೀಜ ಉದುರಿಸಿ ಮರಗಳ ವಂಶಾಭಿವೃದ್ಧಿಗೆ ಕಾರಣವಾಗುತ್ತವೆ.

ಸರಿಯಾದ ಗುಂಪು ಆರಿಸಿ.

(a) 1 ಮತ್ತು 2 (b) 2 ಮತ್ತು 3 (c) 1 ಮತ್ತು 3 (d) 3 ಮತ್ತು 2

IV. ಹಕ್ಕಿಗಳಿಗೆ ಸಂಬಂಧಿಸಿದಂತೆ ಸರಿಯಾದ ಗುಂಪು ಆರಿಸಿ.

(a) ನೆಲ, ವಾಯು, ಹಿಂಸ್ರಕ (b) ವಾಯು, ಹಿಂಸ್ರಕ, ನಿರ್ವಾತ

(c) ನೆಲ, ಜಲ, ಹಿಂಸ್ರಕ (d) ಮರಳು, ಜಲ, ಹಿಂಸ್ರಕ

V. ಆಹಾರ ಕ್ರಮಕ್ಕೆ ಅನುಸಾರ ಪಕ್ಷಿಗಳನ್ನು ______ ಬಗೆಯಲ್ಲಿ ಗುಂಪು ಮಾಡಬಹುದು.

(a) ಐದು (b) ಏಳು (c) ನಾಲ್ಕು (d) ಆರು

2. (A) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5 × 1 = 5**

ಆದಿಮಾನವನಿಗೆ ಯೋಚಿಸುವ ಶಕ್ತಿ ಹೆಚ್ಚಿನ ಪ್ರಮಾಣದಲ್ಲಿ ಇರಲಿಲ್ಲ. ಅವನು ಸೂಕ್ಷ್ಮವಾದ ನಿರೀಕ್ಷಣಾಶಕ್ತಿ ಹೊಂದಿರಲಿಲ್ಲ. ಅವನ ಅಭಿಪ್ರಾಯ ಮತ್ತು ನಡವಳಿಕೆಗಳು ಬಹುಮಟ್ಟಿಗೆ ಭಯ ಮತ್ತು ಅಜ್ಞಾನದಿಂದ ರೂಪಗೊಂಡಿದ್ದವು. ಪ್ರಕೃತಿಯ ಘಟನೆಗಳು ಅವನ ಮೇಲೆ ಗಾಢವಾದ ಪರಿಣಾಮವನ್ನು ಉಂಟು ಮಾಡಿದವು. ಮಿಂಚು, ಗುಡುಗು, ಸಿಡಿಲು ಮತ್ತು ಭೂಕಂಪಗಳೇ ಅವನಿಗೆ ಅತ್ಯಂತ ದಿಗಿಲನ್ನುಂಟು ಮಾಡಿರಬೇಕು. ಹಗಲಿನಲ್ಲಿ ಅಂಧಕಾರವನ್ನು ಉಂಟು ಮಾಡಿದ ಗ್ರಹಣವು ಅವನಿಗೆ ಭಯವನ್ನಷ್ಟೇ ಅಲ್ಲದೆ ಸಮಸ್ಯೆಯನ್ನೂ ತಂದಿತು. ಯಾವುದೋ ಪ್ರಾಣಿಯು ಸೂರ್ಯ ಚಂದ್ರರನ್ನು ನುಂಗಲು ಪ್ರಯತ್ನಿಸಿ ಅದರಲ್ಲಿ ಸೋಲುವುದೇ ಆ ಸನ್ನಿವೇಶದಲ್ಲಿ ಕಂಡು ಬರುತ್ತದೆ ಎಂದು ಭಾವಿಸಿದ. ಹೀಗಾಗಿ 'ರಾಹು ಮತ್ತು ಕೇತು'ಗಳು ಉದಯವಾದವು. ಕನಸುಗಳು, ರೋಗಗಳು ಇವೆಲ್ಲ ಅವನ ಪಾಲಿಗೆ ಅತ್ಯಂತ ವಿಸ್ಮಯವನ್ನುಂಟು ಮಾಡಿದವು.

ಆದಿಮಾನವನಿಗೆ ಪ್ರಶ್ನಿಸುವ ಮನೋಭಾವ ಇರಲಿಲ್ಲ. ಹೀಗಾಗಿ ಅನೇಕ ಸಂಗತಿಗಳನ್ನು ಯೋಚಿಸದೆ ಒಪ್ಪಿಕೊಂಡ. ಕಲ್ಲು ಮೇಲಿನಿಂದ ಬೀಳುವುದು, ಅವನಿಗೆ ಸಹಜಕ್ರಿಯೆಯಾಗಿತ್ತು. ನಿಧಾನವಾಗಿ ಅವನು ಯೋಚಿಸುವ ಶಕ್ತಿಯನ್ನು ಬೆಳೆಸಿಕೊಂಡ. ಪ್ರಶ್ನಿಸುವ ಮನೋಭಾವ ಅವನಲ್ಲಿ ಉಂಟಾಗಿ ಆಶ್ಚರ್ಯ ಮತ್ತು ಕುತೂಹಲ ಕಂಡು ಬಂದಿತು. ಈ ದೃಷ್ಟಿಕೋನ ಅನೇಕ ನಿಸರ್ಗದ ಘಟನೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲು ಕಾರಣವಾಯಿತು. ಈ ಅಂಶವೇ ವಿಜ್ಞಾನ ಮತ್ತು ವೈಜ್ಞಾನಿಕ ಮಾರ್ಗದ ಉದಯಕ್ಕೆ ಕಾರಣವಾಯಿತು.

ಅನೇಕ ದೃಷ್ಟಿಯಲ್ಲಿ ಆಧುನಿಕ ಮಾನವ ಆದಿಮಾನವನಿಗಿಂತ ಬಹುದೂರ ಮುಂದೆ ಬಂದಿದ್ದಾನೆ. ಕಲ್ಲು ನೆಲಕ್ಕೆ ಬೀಳುವುದನ್ನು ಕುರಿತು ನ್ಯೂಟನ್ ಮೊದಲ ಬಾರಿಗೆ ಪ್ರಶ್ನಿಸಿದ. ಅದರ ಬಗ್ಗೆ ವಿಶ್ಲೇಷಿಸಿದ ನಂತರ ಅವನು ಗುರುತ್ವಾಕರ್ಷಣೆ ನಿಯಮವನ್ನು ಕಂಡು ಹಿಡಿದನು. ಆ ನಿಯಮವೇ ಖಗೋಳ ವಿಜ್ಞಾನಕ್ಕೆ ಅಡಿಪಾಯವಾಯಿತು.

ಗುಡುಗು, ಮಿಂಚು, ಭೂಕಂಪಗಳು ಅತಿಮಾನುಷ ಎಂಬ ಅಭಿಪ್ರಾಯ ಹೊರಟು ಹೋಗಿ ವಿಜ್ಞಾನವು ಅವುಗಳಿಗೆ ನಿಖರವಾಗಿ ವಿವರಣೆಯನ್ನು ಕೊಟ್ಟಿತ್ತು. ಇಂದು ಪ್ರೌಢಶಾಲೆಯ ವಿದ್ಯಾರ್ಥಿ ಕೂಡ ಗ್ರಹಣವನ್ನು ತರ್ಕಬದ್ಧವಾಗಿ ವಿವರಿಸಬಲ್ಲ. ಬಹುಪಾಲು ರೋಗಗಳ ಸ್ವರೂಪ ಈಗ ಅರಿವಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಅದ್ಭುತವಾದ ಪ್ರಗತಿಯಾಗಿದೆ. ವಿಜ್ಞಾನಿಯು ಅಣುವಿನಿಂದ ಶಕ್ತಿಯನ್ನು ವಿಭಜಿಸಿದ್ದಾನೆ. ಸೌರವ್ಯೂಹದ ಬೇರೆಯ ಗ್ರಹಗಳ ಶೋಧನೆಗೆ ಅವನು ತೊಡಗಿದ್ದಾನೆ. ಸೃಷ್ಟಿಯ ರಹಸ್ಯವನ್ನು ಅರ್ಥ ಮಾಡಿಕೊಳ್ಳುವಲ್ಲಿ, ಇದೆಲ್ಲಾ ಮನುಷ್ಯನ ಸೋಲಿಲ್ಲದ ಜ್ಞಾನದಾಹದ ಕೊಡುಗೆಯಾಗಿವೆ. ಅದ್ಭುತ ರಮ್ಯ ಕಥೆ ಎನಿಸಿಕೊಂಡ ಘಟನೆಗಳು ಈಗ ವಾಸ್ತವ ಸಂಗತಿಗಳಾಗಿವೆ. ಇದು ಪ್ರಗತಿಯ ಉತ್ತಮವಾದ ಭಾಗ.

**ಪ್ರಶ್ನೆಗಳು.**

I. ಆದಿಮಾನವನ ಅಭಿಪ್ರಾಯ – ನಡವಳಿಕೆಗಳು _____ ರೂಪಗೊಂಡಿದ್ದವು.

(a) ಭಯ – ಕುತೂಹಲದಿಂದ (b) ಅಜ್ಞಾನ – ನಿರಾಸಕ್ತಿಯಿಂದ

(c) ಭಯ – ನಿರಾಸಕ್ತಿಯಿಂದ (d) ಭಯ – ಅಜ್ಞಾನದಿಂದ

II. ಆದಿಮಾನವನಿಗೆ ಭಯವಷ್ಟೆ ಅಲ್ಲದೆ ಸಮಸ್ಯೆಯನ್ನು ತಂದುದು _____.

(a) ಗುಡುಗು (b) ಮಿಂಚು (c) ಸಿಡಿಲು (d) ಗ್ರಹಣ

III. ವಿಜ್ಞಾನ ಮತ್ತು ವೈಜ್ಞಾನಿಕ ಮಾರ್ಗದ ಉದಯಕ್ಕೆ ಕಾರಣ _____.

(a) ಕೇಳುವ ಮನೋಭಾವ (b) ಹೇಳುವ ಮನೋಭಾವ

(c) ಪ್ರಶ್ನಿಸುವ ಮನೋಭಾವ (d) ಉತ್ತರಿಸುವ ಮನೋಭಾವ

IV. ಗುರುತ್ವಾಕರ್ಷಣ ನಿಯಮವೇ _____ ವಿಜ್ಞಾನಕ್ಕೆ ಅಡಿಪಾಯವಾಯಿತು.

(a) ಭೌತ (b) ರಸಾಯನ (c) ಜೀವ (d) ಖಗೋಳ

V. ಅವಿಷ್ಕಾರಗಳೆಲ್ಲಾ ಮನುಷ್ಯನ ಸೋಲಿಲ್ಲದ _____ ಕೊಡುಗೆಯಾಗಿದೆ.

(a) ಪ್ರಯತ್ನದ (b) ಜ್ಞಾನದಾಹದ (c) ಪ್ರಯೋಗದ (d) ಹೋರಾಟದ

**ಅಥವಾ**

(B) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5 × 1 = 5**

ಹಕ್ಕಿಗಳು ವಲಸೆ ಹೋಗುವ ವಿಚಾರವೇ ತುಂಬಾ ನಿಗೂಢ ಹಾಗೂ ವಿಸ್ಮಯ ! ಉತ್ತಮ ಆಹಾರಕ್ಕಾಗಿ ಒಳ್ಳೆಯ ಹವಾಮಾನಕ್ಕಾಗಿ, ತಮ್ಮ ಸಂತಾನಾಭಿವೃದ್ಧಿಯನ್ನು ಸುಗಮಗೊಳಿಸುವುದಕ್ಕಾಗಿ ಹಕ್ಕಿಗಳು ವಲಸೆ ಹೋಗುತ್ತವೆ. ಹತ್ತು ಕಿ.ಮೀ. ದೂರದಿಂದ ಹಿಡಿದು ಅರ್ಧ ಬ್ರಹ್ಮಾಂಡವನ್ನೇ ಸುತ್ತಿ ವಲಸೆ ಹೋಗುವ ಹಕ್ಕಿಗಳಿರುತ್ತವೆ. ಇದು ಒಂದು ಊರಿನಿಂದ ಮತ್ತೊಂದು ಊರಿಗೆ ಇರಬಹುದು ಅಥವಾ ಒಂದು ದೇಶದಿಂದ ಮತ್ತೊಂದು ದೇಶಕ್ಕೂ ಇರಬಹುದು. ಮತ್ತೂ ಮುಂದುವರೆದು ಒಂದು ಖಂಡದಿಂದ ಮತ್ತೊಂದು ಖಂಡಕ್ಕೂ ವಲಸೆ ಹೋಗುವ ಹಕ್ಕಿಗಳಿವೆ. ಈ ಸಂದರ್ಭದಲ್ಲಿ ದೊಡ್ಡ ಹಕ್ಕಿಗಳು ಗಂಟೆಗೆ 80 ಕಿ.ಮೀ. ವೇಗದಲ್ಲಿ ಹಾರಬಲ್ಲವು. ಹಗಲು ಹೊತ್ತಿನಲ್ಲಿ ತಾವಿರುವಲ್ಲೇ ಆಹಾರವನ್ನು ಹುಡುಕಿ ತಿಂದು, ರಾತ್ರಿ ಹೊತ್ತಿನಲ್ಲಿ ಹಾರುತ್ತಾ ಪ್ರಯಾಣ ಮಾಡುವುದೇ ಒಂದು ಸೋಜಿಗ ! ಈ ಹಕ್ಕಿಗಳು ಹೇಗೆ ಹೊರಡುತ್ತವೆ ? ಹೇಗೆ ತಾವು ಕ್ರಮಿಸಬೇಕಾದ ಹಾದಿ, ದಿಕ್ಕುಗಳನ್ನು ತಿಳಿಯುತ್ತವೆ ? ವಲಸೆಯ ಅವಧಿ ಮುಗಿದ ಮೇಲೆ ತಮ್ಮದೇ ಸ್ಥಳಕ್ಕೆ ಹೇಗೆ ಹಿಂದಿರುಗಿ ಬರುತ್ತವೆ ? ಎಲ್ಲವೂ ಸೋಜಿಗವೇ ? ಭಾರತದ ಸುಮಾರು 2060 ಪ್ರಭೇದದ ಹಕ್ಕಿಗಳಲ್ಲಿ 344 ಪ್ರಭೇದಗಳು ವಲಸೆ ಹಕ್ಕಿಗಳೇ. ಮನುಷ್ಯರು ಎಳೆದುಕೊಳ್ಳುವ ಗಡಿರೇಖೆಗಳ ಸಂಕುಚಿತತೆ ಪಕ್ಷಿಲೋಕಕ್ಕಿಲ್ಲ. ಅವು ಆಕಾಶಲೋಕದ ಸ್ವತಂತ್ರ ಪ್ರಜೆಗಳು.

ಹಾರುವ, ಗೂಡುಕಟ್ಟುವ, ವಲಸೆಹೋಗುವ, ಸಾಮರ್ಥ್ಯಗಳೆಲ್ಲ ನಿಸರ್ಗದತ್ತವಾಗಿ ಬಂದಿವೆ. ಹೊಸದಾಗಿ ಏನನ್ನಾದರೂ ಕಲಿಯುವ ಸಾಮರ್ಥ್ಯ ಬಹುಪಕ್ಷಿಗಳಿಗಿಲ್ಲ. ಕಾಗೆಯನ್ನು ಹಕ್ಕಿಗಳಲ್ಲಿ ಬುದ್ಧಿವಂತ ಪಕ್ಷಿ ಎಂದು ಗುರುತಿಸಲಾಗಿದೆ. ಜಪಾನ್ ದೇಶದ ವರದಿಯೊಂದು ಹೀಗಿದೆ – ಅಲ್ಲಿನ ವಿಶ್ವವಿದ್ಯಾಲಯದ ಆವರಣದಲ್ಲಿ ವಾಸಿಸುವ ಕಾಗೆಗಳು ಬಹಳ ಜಾಣ ಕಾಗೆಗಳಂತೆ ! ರಸ್ತೆಯಲ್ಲಿ ಸಂಚರಿಸುವ ವಾಹನಗಳು ಟ್ರಾಫಿಕ್ ಲೈಟ್ ಬಂದು ನಿಂತಾಗ, ಕಾಗೆಗಳು ತಾವು ಸಂಗ್ರಹಿಸಿದ ಗಟ್ಟಿ ಬೀಜಗಳಾದ ವಾಲ್ನಟ್‌ಗಳನ್ನು ರಸ್ತೆಯ ಮೇಲೆ ಚಲ್ಲಿ ಹಾರುತ್ತವೆ. ಅವುಗಳ ಮೇಲೆ ಗಾಡಿಗಳು ಚಲಿಸಿ ವಾಲ್ನಟ್ ಒಡೆಯುತ್ತವೆ. ಪುನಃ ವಾಹನಗಳು ನಿಂತಾಗ ಕಾಗೆಗಳು ಕೆಳಗೆ ಬಂದು ಬೀಜಗಳನ್ನು ತಿನ್ನುತ್ತವೆ. ಒಡೆಯದೆ ಉಳಿದ ಬೀಜವನ್ನು ಮತ್ತೆ ರಸ್ತೆಯ ಮೇಲಿರಿಸಿ, ಹತ್ತಿರದ ವಿದ್ಯುತ್ ತಂತಿಗಳ ಮೇಲೆ ಹಾರಿ ಕುಳಿತು ವಾಹನ ಚಲಿಸಿ ಬೀಜಗಳು ಒಡೆಯುವುದಕ್ಕಾಗಿ ಕಾಯುತ್ತವೆ !

ಗಮನಿಸಿ ಅತ್ಯಂತ ನಿಬಿಡವಾದ ಈ ರಸ್ತೆಗಳಲ್ಲಿ ಕಾಗೆಗಳಿಗೆ ಈ ಕಾರ್ಯಕ್ಕೆ ಸಿಗುವುದು ಹಲವು ಸೆಕೆಂಡುಗಳು ಮಾತ್ರ !

ಹಕ್ಕಿಗಳ ಕ್ರಿಯಾಶೀಲತೆ ಊಹಾತೀತ ! ಉದಾಹರಣೆಗೆ ಗುಬ್ಬಚ್ಚಿಗಳು ತಮ್ಮ ಮರಿಗಳಿಗೆ ದಿನವೊಂದಕ್ಕೆ ನೂರಾರು ಬಾರಿ ಗುಟುಕು ನೀಡುತ್ತವೆ. ಮಂಗಟ್ಟೆಹಕ್ಕಿ (ಹಾರ್ನ್‌ಬಿಲ್) ತನ್ನ ಹೆಂಡತಿಯನ್ನು ಗೂಡಿನೊಳಗೇ ಇರಿಸಿ, ಮೂರು ಅಥವಾ ನಾಲ್ಕು ಮರಿಗಳಿಗೆ ಅದರ ತಾಯಿಗೆ, ದಿನವೊಂದಕ್ಕೆ ನಲವತ್ತಕ್ಕೂ ಹೆಚ್ಚು ಬಾರಿ ಆಹಾರವನ್ನು ತಂದು ತಿನ್ನಿಸುತ್ತದೆ. ಆದ್ದರಿಂದಲೇ ಅದರ ಕೊಕ್ಕುಗಳು ನೀಳವಾಗಿಯೂ ಬಲಿಷ್ಠವಾಗಿಯೂ ಇವೆ. ಎಷ್ಟೋ ಬಾರಿ ತನಗೇ ಹಸಿವೆಯಾಗುತ್ತಿದ್ದರೂ, ತನ್ನದೇ ಕೊಕ್ಕಿನ ತುಂಬಾ ಆಹಾರವನ್ನು ತುಂಬಿಕೊಂಡಿದ್ದರೂ, ಅದು ನುಂಗದೇ ತಾಯಿ ಮತ್ತು ಮರಿಹಕ್ಕಿಗಳಿಗೆ ಹೊಟ್ಟೆ ತುಂಬಿಸುತ್ತವೆ. ಕೆಲವೊಮ್ಮೆ ಆಹಾರದ ಕೊರತೆಯುಂಟಾಗಿ ಗಂಡು ಹಕ್ಕಿ ಸತ್ತುಹೋದರೆ ಗೂಡಿನಲ್ಲಿರುವ ಮರಿಹಕ್ಕಿಗಳು ಮತ್ತು ತಾಯಿಯೂ ಸತ್ತಂತೇ ! ಈ ಕಾರಣಕ್ಕೆ ಹಾರ್ನ್‌ಬಿಲ್‌ಗಳ ಸಂತತಿ ದಿನದಿಂದ ದಿನಕ್ಕೆ ತೀವ್ರವಾಗಿ ಕುಸಿಯುತ್ತಿದೆ.

**ಪ್ರಶ್ನೆಗಳು.**

I. ಪಕ್ಷಿಗಳು ವಲಸೆ ಹೋಗುವುದು

1. ಪರ್ಯಟನೆಗಾಗಿ
2. ಉತ್ತಮ ಆಹಾರಕ್ಕಾಗಿ
3. ಉತ್ತಮ ಪರಿಸರಕ್ಕಾಗಿ
4. ಒಳ್ಳೆಯ ಹವಾಮಾನಕ್ಕಾಗಿ

ಸರಿಯಾದ ಗುಂಪು ಆರಿಸಿ.

(a) 1 ಮತ್ತು 2 (b) 2 ಮತ್ತು 3 (c) 1 ಮತ್ತು 4 (d) 2 ಮತ್ತು 4

II. ಈ ಸಾಮರ್ಥ್ಯಗಳೆಲ್ಲ ಹಕ್ಕಿಗಳಿಗೆ ನಿಸರ್ಗದತ್ತವಾಗಿ ಬಂದಿವೆ.

1. ಹಾರುವ
2. ಆಹಾರ ಸಂಗ್ರಹಿಸುವ
3. ಗೂಡು ಕಟ್ಟುವ
4. ವಲಸೆ ಹೋಗುವ

ಸರಿಯಾದ ಗುಂಪು ಆರಿಸಿ.

(a) 1, 3, 4 (b) 1, 2, 4 (c) 2, 3, 4 (d) 1, 2, 3

III. ದೊಡ್ಡ ಹಕ್ಕಿಗಳು ಗಂಟೆಗೆ ಇಷ್ಟು ಕಿ.ಮೀ. ವೇಗದಲ್ಲಿ ಹಾರಬಲ್ಲವು.

(a) 344 (b) 30 (c) 80 (d) 60

IV. ಹಕ್ಕಿಗಳಲ್ಲಿ ಬುದ್ಧಿವಂತ ಪಕ್ಷಿ

(a) ಗುಬ್ಬಚ್ಚಿ (b) ಮಂಗಟ್ಟೆಹಕ್ಕಿ (c) ಕಾಗೆ (d) ಪಾರಿವಾಳ

V. ಹಾರ್ನ್‌ಬಿಲ್‌ಗಳ ಸಂತತಿ ದಿನದಿಂದ ದಿನಕ್ಕೆ ಕಡಿಮೆಯಾಗಲು ಕಾರಣ

(a) ಆಹಾರದ ಕೊರತೆ

(b) ಗಂಡು ಹಕ್ಕಿ ಗೂಡಿಗೆ ಮರಳಿ ಬಾರದಿರುವುದು

(c) ಆಹಾರದ ಕೊರತೆಯುಂಟಾಗಿ ಗಂಡು ಹಕ್ಕಿ ಸಾಯುವುದು

(d) ಸುರಕ್ಷಿತ ವಾತಾವರಣ ಇಲ್ಲದಿರುವುದು

## SECTION – B
### ಅನ್ವಯಿಕ ವ್ಯಾಕರಣ

3. ಕೆಳಗೆ ವ್ಯಾಕರಣಾಂಶಗಳ ಬಹುಆಯ್ಕೆಯ **5** ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ **4** ಪ್ರಶ್ನೆಗಳಿಗೆ ಉತ್ತರಿಸಿ.

**4 × 1 = 4**

I. ಅತ್ಯವಸರ – ಪದವು ಈ ಸಂಧಿಗೆ ಉದಾಹರಣೆಯಾಗಿದೆ.

(a) ಸವರ್ಣದೀರ್ಘ ಸಂಧಿ (b) ಗುಣ ಸಂಧಿ

(c) ಯಣ್ ಸಂಧಿ (d) ವೃದ್ಧಿ ಸಂಧಿ

II. ಬೇಹಾರಿ – ಕೋಗಿಲೆ – ಈ ಪದಗಳ ತತ್ಸಮ ರೂಪಗಳು

(a) ಕೋಕಿಲಾ – ವ್ಯಾಪಾರಿ (b) ವ್ಯಾಪಾರಿ – ಶುಕ

(c) ವ್ಯಾಪಾರಿ – ಕೋಕಿಲಾ (d) ವಿಕಾರಿ – ಕೋಗಿಲೆ

III. ಒಳ್ : ಸಪ್ತಮಿ : : ಅತ್ತಣಿಂ : _____.

(a) ಪ್ರಥಮ (b) ಚತುರ್ಥಿ (c) ದ್ವಿತೀಯಾ (d) ಪಂಚಮಿ

IV. ಅದೃಷ್ಟ – ಪದದ ವಿರುದ್ಧಾರ್ಥಕ ಪದ

(a) ದೃಷ್ಟ (b) ದುರದೃಷ್ಟ (c) ಆದೃಷ್ಟ (d) ಸದೃಷ್ಟ

V. ಸಾಕ್ಷಿ ಮಾಡಿ, ಕೈಕೊಳ್ಳುದು – ಪದಗಳು ಈ ಸಮಾಸಕ್ಕೆ ಉದಾಹರಣೆಗಳು

(a) ದ್ವಿಗು (b) ಗಮಕ (c) ಕ್ರಿಯಾ (d) ಕರ್ಮಧಾರೆಯ

4. ಕೆಳಗೆ ವ್ಯಾಕರಣಾಂಶಗಳ ಬಹುಆಯ್ಕೆಯ **5** ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ **4** ಪ್ರಶ್ನೆಗಳಿಗೆ ಉತ್ತರಿಸಿ.

**4 × 1 = 4**

I. ಕೃತ್ರಿಮ – ಪದದ ಅರ್ಥ

(a) ಮೋಸ (b) ಸತ್ಯ (c) ಸುಳ್ಳು (d) ದ್ವೇಷ

II. ಮೂರನೆಯ – ಇದು _____ ಪದಕ್ಕೆ ಉದಾಹರಣೆಯಾಗಿದೆ.

(a) ಸರ್ವನಾಮ (b) ಸಂಖ್ಯಾವಾಚಕ

(c) ದಿಗ್ವಾಚಕ (d) ಕ್ರಿಯಾ

III. ಸೀತೆಯು ಸುಂದರವಾಗಿ ಕನ್ನಡ ಬರೆಯುತ್ತಾಳೆ – ಇಲ್ಲಿಯ ಕ್ರಿಯಾಪದ

(a) ಸುಂದರ (b) ಕನ್ನಡ (c) ಬರೆಯುತ್ತಾಳೆ (d) ಸೀತೆ

IV. ಅನುಕರಣಾವ್ಯಯಕ್ಕೆ ಉದಾಹರಣೆಯಿದು

(a) ಮನೆಮಠ (b) ಗರಿಗರಿ (c) ಕಾಫಿಗೀಫಿ (d) ಧಗಧಗ

V. ಪ್ರಯಾಣಿಕರಿಗೆ ತಾವು ಕಳೆದು ಕೊಂಡಿದ್ದ ಗಂಟು ಮತ್ತೆ ಸಿಕ್ಕಿತು – ಈ ವಾಕ್ಯದಲ್ಲಿರುವ ಆತ್ಮಾರ್ಥಕ ಸರ್ವನಾಮ

(a) ಪ್ರಯಾಣಿಕರಿಗೆ (b) ತಾವು (c) ಮತ್ತೆ (d) ಗಂಟು

5. ಕೆಳಗೆ ವ್ಯಾಕರಣಾಂಶಗಳ ಬಹುಆಯ್ಕೆಯ **5** ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ **4** ಪ್ರಶ್ನೆಗಳಿಗೆ ಉತ್ತರಿಸಿ. **4 × 1 = 4**

I. ಮ್ಯಾಗ – ಇದರ ಗ್ರಾಂಥಿಕ ರೂಪ

(a) ವೇಗ (b) ಮೇಲೆ (c) ಮಗ (d) ಮಯಗ

II. ಗೆಳೆಯರಾಗಿ ಒಬ್ಬರ ಕೈಯನ್ನೊಬ್ಬರು ಹಿಡಿಯಿರಿ – ಇಲ್ಲಿಯ ಕ್ರಿಯಾಪದದ ರೂಪ

(a) ವಿಧ್ಯರ್ಥಕ (b) ಸಂಭವನಾರ್ಥಕ (c) ಪ್ರಶ್ನಾರ್ಥಕ (d) ನಿಷೇಧಾರ್ಥಕ

III. ಹಳ್ಳಿಯ ಜನರು ಕೆರೆಯ ಹೂಳನ್ನು ಎತ್ತಿದರು – ಇದರ ಕರ್ಮಣಿ ರೂಪ

(a) ಕೆರೆಯ ಹೂಳನ್ನು ಹಳ್ಳಿಯ ಜನರು ಎತ್ತಿದರು

(b) ಕೆರೆಯ ಹೂಳನ್ನು ಎತ್ತಿದರು ಹಳ್ಳಿಯ ಜನರು

(c) ಕೆರೆಯ ಹೂಳು ಹಳ್ಳಿಯ ಜನರಿಂದ ಎತ್ತಲ್ಪಟ್ಟಿತು

(d) ಎತ್ತಿದರು ಹಳ್ಳಿಯ ಜನರು ಕೆರೆಯ ಹೂಳನ್ನು

IV. ಕಟ್ಟುವುದು ಕಠಿಣ, ಕೆಡಹುವುದು _____. ಈ ಗಾದೆಮಾತನ್ನು ಪೂರ್ಣಗೊಳಿಸಿ.

(a) ಸರಳ (b) ಸುಲಭ (c) ಸಲಿಲ (d) ಕಷ್ಟ

V. ಆಗೋಣ – ಈ ಕ್ರಿಯಾಪದದ ಧಾತುರೂಪ

(a) ಆಗ (b) ಆಗಿ (c) ಆಗಿದೆ (d) ಆಗು

6. ಕೆಳಗೆ ವ್ಯಾಕರಣಾಂಶಗಳ ಬಹುಆಯ್ಕೆಯ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ. **4 × 1 = 4**

I. ಕಾವೇರಿ ನಾಲೆ ಇಲ್ಲಿಗೆ ಬಂದರೆ ಬಡತನ ನೀಗೀತೆ ? – ಇದರ ಸಂಭವನಾರ್ಥಕ ರೂಪ

(a) ಕಾವೇರಿ ನಾಲೆ ಇಲ್ಲಿಗೆ ಬಂದರೆ ಬಡತನ ನೀಗುತ್ತದೆ.

(b) ಕಾವೇರಿ ನಾಲೆ ಇಲ್ಲಿಗೆ ಬಂದರೆ ಬಡತನ ನೀಗುವುದೇ ?

(c) ಕಾವೇರಿ ನಾಲೆ ಇಲ್ಲಿಗೆ ಬಂದರೆ ಬಡತನ ನೀಗೀತು.

(d) ಕಾವೇರಿ ನಾಲೆ ಇಲ್ಲಿಗೆ ಬಂದರೆ ಬಡತನ ನೀಗಬಹುದೇ ?

II. ದ್ವಿರುಕ್ತಿ ಪದವಿದು

(a) ಬಟ್ಟಬಯಲು (b) ನಿಲ್ಲಿನಿಲ್ಲಿ (c) ಹಾಲ್ಜೇನು (d) ಚಟ ಚಟ

III. ಪರ್ವತ : ರೂಢನಾಮ :: ವಿಜ್ಞಾನಿ : _____.

(a) ಅನ್ವರ್ಥಕನಾಮ (b) ಅಂಕಿತನಾಮ (c) ಗುಣವಾಚಕ (d) ಸರ್ವನಾಮ

IV. ಈ ಪದಗಳಲ್ಲಿ ಆದೇಶ ಸಂಧಿಗೆ ಉದಾಹರಣೆಯಾಗಿರುವ ಪದ

(a) ತಕ್ಕಿನಿತು (b) ಶಾಲೆಯಲ್ಲಿ (c) ಬಂದಲ್ಲದೆ (d) ಕಡುವೇಳ್ಪು

## SECTION – C

### ಬಹು ಆಯ್ಕೆಯ ಪ್ರಶ್ನೆಗಳು – ಪದ್ಯಗಳ ಅಧ್ಯಯನ

7. ಈ ಕೆಳಗೆ ಕೊಟ್ಟಿರುವ ಪದ್ಯದಲ್ಲಿನ ಸಂಕಲ್ಪಗೀತೆ' ಪರಿಚಿತ ಕವಿತೆಯನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. **5 × 1 = 5**

ಸುತ್ತಲು ಕವಿಯುವ ಕತ್ತಲೆಯೊಳಗೆ
ಪ್ರೀತಿಯ ಹಣತೆಯ ಹಚ್ಚೋಣ
ಬಿರುಗಾಳಿಗೆ ಹೊಯ್ದಾಡುವ ಹಡಗನು
ಎಚ್ಚರದಲಿ ಮುನ್ನಡೆಸೋಣ ||೧||

ಕಲುಷಿತವಾದೀ ನದಿಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ ||೨||

ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸ ಭರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡಗೋಡೆಗಳ
ಕೆಡವುತ ಸೇತುವೆಯಾಗೋಣ ||೩||

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ ||೪||

I. "ಪ್ರೀತಿಯ ಹಣತೆಯ ಹಚ್ಚೋಣ" – ಈ ಸಂದರ್ಭದ ಸ್ವಾರಸ್ಯ
   (a) ಭಯ ಹುಟ್ಟಿಸುವುದು (b) ಸಂಶಯ ಹುಟ್ಟಿಸುವುದು
   (c) ಭಯ – ಸಂಶಯ ಹುಟ್ಟಿಸುವುದು (d) ಭಯ – ಸಂಶಯ ಹೋಗಲಾಡಿಸುವುದು

II. ಕಾಡು ಮೇಡುಗಳ ಸ್ಥಿತಿ ಹೀಗಾಗಿದೆ ?
   (a) ಕಲುಷಿತಗೊಂಡಿವೆ (b) ಚಿಗುರೊಡೆದಿದೆ (c) ಬರಡಾಗಿವೆ (d) ಬೆಳೆದು ನಿಂತಿದೆ

III. ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ ಕಟ್ಟಬೇಕಾಗಿರುವುದು
   (a) ಅಡ್ಡಗೋಡೆಗಳನ್ನು (b) ಹೊಸ ಭರವಸೆಗಳನ್ನು
   (c) ಹೊಸ ಕಟ್ಟಡಗಳನ್ನು (d) ಮನೆಗಳನ್ನು

IV. _____ ಗಳೆಲ್ಲವೂ ಪಥಗಳೆನ್ನುವ ಹೊಸ ಎಚ್ಚರದೊಳು ಬದುಕಬೇಕಾಗಿದೆ.

(a) ಹಳ್ಳಿಯ ದಾರಿ (b) ಸುಖ ದುಃಖ (c) ಪಂಥ (d) ಮತ

V. ಕವಿ ನಾಳಿನ ಕನಸನ್ನು ಎಲ್ಲಿ ಬಿತ್ತಬೇಕೆಂದಿರುವನು ?

(a) ಮಕ್ಕಳಲ್ಲಿ (b) ಕಂದಿದ ಕಣ್ಣೊಳು (c) ಯುವಕರಲ್ಲಿ (d) ನಿರಾಸೆಯಲ್ಲಿ

8. ಈ ಕೆಳಗೆ ಕೊಟ್ಟಿರುವ ಸಮಿತಿ ರಚನೆ । ಡಿ.ಎನ್. ಜಯಪ್ಪ ಗೌಡ ಅವರ ಭಾಗ್ಯಶಿಲ್ಪಿಗಳು ಪರಿಚಿತ ಗದ್ಯಭಾಗವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ. **5 × 1 = 5**

ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ನೇಮಿಸುವ ಮೂಲಕ ಹೊಸ ಮನ್ವಂತರಕ್ಕೆ ಅಡಿಪಾಯ ಹಾಕಿದರು. ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕಚೇರಿಯ ಕೆಲಸ ಕಾರ್ಯಗಳಲ್ಲಿ ಸುಧಾರಣೆ ತಂದರು. ಅಷ್ಟೇ ಅಲ್ಲದೆ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು. ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು. ಗಾಂಧೀಜಿ ಅವರು ಮೈಸೂರಿನ ಆಡಳಿತ ರೀತಿಯನ್ನು ಮುಕ್ತಕಂಠದಿಂದ ಹೊಗಳಿದರು. ಇದರಿಂದ 'ಮೈಸೂರು ಮಾದರಿ' ಎಂಬ ಹೊಸ ಆಡಳಿತ ಮಾದರಿ ಜನ್ಮ ತಾಳಿತು.

ವಿಶ್ವೇಶ್ವರಯ್ಯ ಅವರು ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದ್ದರು. ಶಿಕ್ಷಣವು ಸಂಜೀವಿನಿ ಎಂಬುದನ್ನರಿತಿದ್ದ ಅವರು ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು. ಅದಕ್ಕಾಗಿ 1913 ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು. ಪ್ರೌಢಶಿಕ್ಷಣ ಶಾಲೆಗಳು ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಒಳಪಟ್ಟಿದ್ದವು. ಇದನ್ನು ಬದಲಿಸಿ ಸಂಸ್ಥಾನವೇ ಪ್ರತ್ಯೇಕವಾದ ಪ್ರೌಢ ಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ರೂಪುಗೊಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಇವರ ದೂರದೃಷ್ಟಿಯ ಮತ್ತೊಂದು ಫಲಶ್ರುತಿ. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂಬುದನ್ನು ಮನಗಂಡ ಇವರು ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಇದಕ್ಕಾಗಿಯೇ ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು. ಏಕೀಕೃತ ಕರ್ನಾಟಕದ ರಚನೆ ಮತ್ತು ಕನ್ನಡ ಭಾಷೆ ಹಾಗೂ ಸಾಹಿತ್ಯಗಳ ಬಗ್ಗೆ ಸಾರ್ವಜನಿಕರಲ್ಲಿ ಉಂಟಾಗಿದ್ದ ಒಲವನ್ನು ಮನಗಂಡು "ಕನ್ನಡ ಸಾಹಿತ್ಯ ಪರಿಷತ್ತ್" ನ್ನು ಸ್ಥಾಪಿಸಿದ್ದು ಇವರ ಕಾಲದ ಮತ್ತೊಂದು ಮಹತ್ವದ ಸಾಧನೆ.

ವಿಶ್ವೇಶ್ವರಯ್ಯ ಅವರು ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದ್ದರು. "ಕೈಗಾರಿಕೀಕರಣ ಇಲ್ಲವೆ ಅವನತಿ" ಎಂಬ ಘೋಷಣೆ ಮಾಡಿದರು. ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು ಸ್ಥಾಪಿಸುವುದು ಅವರ ದೊಡ್ಡ ಗುರಿಯಾಗಿತ್ತು. ಇದಲ್ಲದೆ ಹೆಂಚಿನ ಕಾರ್ಖಾನೆ, ಮೂಳೆ ಮತ್ತು ಗೊಬ್ಬರ ತಯಾರಿಕಾ ಸ್ಥಾವರ, ಸಕ್ಕರೆ ಕಾರ್ಖಾನೆ, ಔಷಧಿ ತಯಾರಿಕಾ ಘಟಕ, ಗಂಧದ ಎಣ್ಣೆ, ಬೆಂಕಿ ಕಡ್ಡಿ ಹಾಗೂ ಕಾಗದದ ಕಾರ್ಖಾನೆಗಳು ಸ್ಥಾಪಿತವಾದವು. ಸೋಪು ಮತ್ತು ಲೋಹ ತಯಾರಿಕೆ, ಕಲೆ ಮತ್ತು ಕರಕುಶಲ ಡಿಪೋ, ಕೃಷ್ಣರಾಜೇಂದ್ರ ಬಟ್ಟೆ ಗಿರಣಿ, ಕಾಗದದ ತಿರುಳು, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ಮತ್ತು ಪೀಠೋಪಕರಣಗಳ ತಯಾರಿಕಾ ಘಟಕಗಳು – ಹೀಗೆ ನೂರಾರು ಕೈಗಾರಿಕೆಗಳು ಪ್ರಾರಂಭಗೊಂಡವು.

ಪ್ರಶ್ನೆಗಳು.

I. ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ನೇಮಿಸುವ ಮೂಲಕ ಯಾವುದಕ್ಕೆ ಅಡಿಪಾಯ ಹಾಕಿದರು ?

(a) ಹೊಸ ಆಡಳಿತಕ್ಕೆ (b) ಹೊಸ ಮನ್ವಂತರಕ್ಕೆ (c) ಹೊಸ ಯುಗಕ್ಕೆ (d) ಹೊಸ ವ್ಯವಸ್ಥೆಗೆ

II. ಗಾಂಧೀಜಿಯವರ ಹೊಗಳಿಕೆಯಿಂದ ಯಾವ ಮಾದರಿ ಆಡಳಿತ ಜನ್ಮ ತಾಳಿತು ?

(a) ಕರ್ನಾಟಕ ಮಾದರಿ (b) ಒಡೆಯರ್ ಮಾದರಿ

(c) ಮೈಸೂರು ಮಾದರಿ (d) ಏಕ ವ್ಯಕ್ತಿ ಮಾದರಿ

III. ವಿಶ್ವೇಶ್ವರಯ್ಯನವರು ಸಮಸ್ಯೆಗಳಿಗೆ ಯಾವುದರಿಂದ ಪರಿಹಾರವೆಂದು ನಂಬಿದ್ದರು ?

(a) ತಾಂತ್ರಿಕ ಶಿಕ್ಷಣದಿಂದ (b) ವೃತ್ತಿಪರ ಶಿಕ್ಷಣದಿಂದ

(c) ಶಿಕ್ಷಣ ಸುಧಾರಣೆಯಿಂದ (d) ಆಧುನಿಕ ಶಿಕ್ಷಣದಿಂದ

IV. ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಲು _____ ಸಂಸ್ಥೆಗಳನ್ನು ಪ್ರಾರಂಭಿಸಲಾಯಿತು.

(a) ಮೈಸೂರು – ಮಂಡ್ಯದಲ್ಲಿ (b) ಭದ್ರಾವತಿ – ಮಂಡ್ಯದಲ್ಲಿ

(c) ಬೆಂಗಳೂರು – ಮೈಸೂರಿನಲ್ಲಿ (d) ಮಂಡ್ಯ – ಮೈಸೂರಿನಲ್ಲಿ

V. ಗುಂಪಿಗೆ ಸೇರದನ್ನು ಗುರುತಿಸಿ.

(a) ಕಾಗದದ ಕಾರ್ಖಾನೆ (b) ಸಕ್ಕರೆ ಕಾರ್ಖಾನೆ

(c) ಹೆಂಚಿನ ಕಾರ್ಖಾನೆ (d) ರಸಗೊಬ್ಬರ ಕಾರ್ಖಾನೆ

9. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ **ನಾಲ್ಕು** ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. **4 × 1 = 4**

I. ವಿವೇಕಾನಂದ ಅವರು

(a) ಪ್ರಖರ ಚಿಂತಕ (b) ಶಿಖರ ಚಿಂತಕ (c) ಪ್ರಖರ ವಾಗ್ಮಿ (d) ಪ್ರಖರ ವಾಕ್ಪಟು

II. ಜಾತಿವಾದ – ಕೋಮುವಾದಗಳು ಮುನ್ನೆಲೆಗೆ ಬಂದು _____ ನುಂಗುತ್ತಿವೆ.

(a) ಮಾನವೀಯತೆಯನ್ನು (b) ಮಾನವೀಯ ಆದರ್ಶವನ್ನು

(c) ಮಾನವತೆಯನ್ನು (d) ಮಾನವೀಯ ಮೌಲ್ಯಗಳನ್ನು

III. ಪುಟ್ಟ ಪೋರಿ _____ ಕೆಲಸ ಮಾಡುತ್ತಿದ್ದಾಳೆ.

(a) ಕಸಗುಡಿಸುವ (b) ಸಾರಣೆಯ (c) ಮುಸುರೆ ತಿಕ್ಕುವ (d) ಭತ್ತ ಕುಟ್ಟುವ

IV. ಬಡತನ, ಸುಂದರಿ ಮತ್ತು ತಂದೆಗೆ ಕಷ್ಟವಾಗಲಿಲ್ಲ ಅವರದು

(a) ಜೀವನ ಸರಳವಾಗಿತ್ತು (b) ಸುಂದರ ಬದುಕಾಗಿತ್ತು

(c) ತ್ಯಾಗದ ಜೀವನವಾಗಿತ್ತು (d) ಸರಳ ಮತ್ತು ಸುಂದರ ಜೀವನವಾಗಿತ್ತು

## SECTION – D

### ಬರವಣಿಗೆ ಕೌಶಲ

10. ಸರಿಯಾದ ಸಮಯಕ್ಕೆ ಬಸ್ ಪಾಸ್ ಸಿಗದಿರುವುದರಿಂದ ಆಗುತ್ತಿರುವ ಅನಾನುಕೂಲತೆಗಳನ್ನು ವಿವರಿಸಿ, ತ್ವರಿತ ಗತಿಯಲ್ಲಿ ಬಸ್ ಪಾಸ್ ವಿತರಿಸುವಂತೆ ವಿನಂತಿಸಿಕೊಂಡು ಸಂಬಂಧಿಸಿದ ಘಟಕ ವ್ಯವಸ್ಥಾಪಕರಿಗೆ ಪತ್ರ ಬರೆಯಿರಿ. **4**

ಅಥವಾ

ದಿನಾಂಕ 1-2-2023 ರ ವಿಶ್ವವಾಣಿ ದಿನಪತ್ರಿಕೆಯ ಪ್ರಕಟಣೆಯ ಮೇರೆಗೆ 'ನಿರ್ದೇಶಕರು, ಗ್ರಂಥಾಲಯ ವಿಭಾಗ, ಗುಲ್ಬರ್ಗ ವಿಶ್ವವಿದ್ಯಾನಿಲಯ' ಇಲ್ಲಿಗೆ ಗ್ರಂಥಾಲಯ ಪಾಲಕರ ಹುದ್ದೆಗೆ ಅರ್ಜಿ ಸಲ್ಲಿಸಿ.

11. ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಸುಸಂದರ್ಭದಲ್ಲಿ ನಿಮ್ಮ ವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಮೂರ್ತಿ ಅನಾವರಣ ಕಾರ್ಯಕ್ರಮದ ವರದಿ ತಯಾರಿಸಿ. **4**

12. ಈ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. **4**

    I. ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

    II. ಮಹಿಳಾ ಸಬಲೀಕರಣ

    III. ಸಾಮಾಜಿಕ ಪಿಡುಗುಗಳು

### ಪದ್ಯಗಳ ಅಧ್ಯಯನ

13. ಈ ಕೆಳಗಿನ ಪ್ರಶ್ನೆಗಳಿಗೆ **ಎರಡು** ವಾಕ್ಯಗಳಲ್ಲಿ ಉತ್ತರಿಸಿ. **2 × 4 = 8**

    I. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು ?

    II. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ಮಾಡಿತು ?

    III. ಯಾರಿಗೆ ವಸಂತ ಮುಖ ತೋರಲಿಲ್ಲ ?

    IV. ಜಲಿಯನ್‌ವಾಲಾ ಬಾಗ್ ನಲ್ಲಿರುವ ಒಕ್ಕಣೆ ಏನು ?

14. ಈ ಕೆಳಗಿನ ಪ್ರಶ್ನೆಗಳಿಗೆ **5-6** ವಾಕ್ಯಗಳಲ್ಲಿ ಉತ್ತರಿಸಿ. **2 × 3 = 6**

I. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಯನ್ನು ವಿವರಿಸಿ.

II. ಕೃಷ್ಣನು, ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು ?

15. ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಹಾಗೂ ಸ್ವಾರಸ್ಯದೊಡನೆ ವಿವರಿಸಿ. **2 × 3 = 6**

I. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ"

**ಅಥವಾ**

"ದಯವಿಟ್ಟು ಬಾಗಿಲು ತೆಗೆಯಿರಿ, ನಾನು ಗಾಯಗೊಂಡಿದ್ದೇನೆ"

II. "ಹೊಡೆದರೂ ಗುಂಡ ಕರುಣ ಇಲ್ಲದಂಗ"

**ಅಥವಾ**

"ಮಾರಿಗೌತಣವಾಯ್ತು ನಾಳಿನ ಭಾರತವು"

16. ಈ ಕೆಳಗಿನ ಪ್ರಶ್ನೆಗಳಿಗೆ **8-10** ವಾಕ್ಯಗಳಲ್ಲಿ ಉತ್ತರಿಸಿ. **1 × 4 = 4**

ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

**ಅಥವಾ**

ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ವಿವರಿಸಿ.

17. ಈ ಕೆಳಗಿನ ಪ್ರಶ್ನೆಗಳಿಗೆ **8-10** ವಾಕ್ಯಗಳಲ್ಲಿ ಉತ್ತರಿಸಿ. **1 × 4 = 4**

ಪ್ರಕೃತಿಯ 'ಹಸುರು' ಜೀವಜಗತ್ತಿಗೆ ಎಷ್ಟು ಮುಖ್ಯ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

**ಅಥವಾ**

ಲವನ ನಡವಳಿಕೆ ಮೆಚ್ಚುಗೆಯಾಯಿತೇ ? ಏಕೆ ?

---